ಬೂಕನಕೆರೆ ವಿಜೇಂದ್ರ, ಮೈಸೂರು

*ಮೇಡಂ ಎಂದರೆ ಮಾತನಾಡದ ನರ್ಸ್, ಸಿಸ್ಟರ್ ಎಂದರೆ ಮಾತನಾಡುತ್ತಾಳಲ್ಲ...?*



ಸಿಸ್ಟರ್ ಎಂದಾಕ್ಷಣ ನೀವು ಅವರಿಗೆ ಬ್ರದರ್ ಆಗುವುದರಿಂದ ಬಾದರ್ ಆಗುವುದಿಲ್ಲವೆಂಬ ನಂಬಿಕೆ.

ಎಚ್.ಜಿ. ಜಗದೀಶ್, ಮೈಸೂರು

*ಪ್ರಪಂಚದಲ್ಲಿ ಮಾದಕ ವಸ್ತುಗಳೇ ಇಲ್ಲದಿದ್ದರೆ ಹೇಗಿರುತ್ತಿತ್ತು ರಾಂಜೀ?*

ನಶೆ ಏರಬೇಕೆಂದರೆ ಐಟಂ ಸಾಂಗಿಗೇ ಕಾಯಬೇಕಾಗುತ್ತಿತ್ತು!

ಪಿ.ಎನ್. ಶ್ರೀವತ್ಸ, ಬೆಂಗಳೂರು

*ಮನುಷ್ಯರಿಗೆ ನಗುವುದನ್ನು ಕರುಣಿಸುವುದರ ಬದಲು ದೇವನು ಪ್ರಾಣಿಪಕ್ಷಿಗಳಿಗೆ ಕರುಣಿಸಿದ್ದರೆ ಚೆನ್ನಿತ್ತಲ್ಲವೇ...?*

ಇಲ್ಲ. ಟೂತ್ ಬ್ರಷ್, ಟೂತ್ ಪೇಸ್ಟ್ ಬಳಸದ ಕಾರಣ ಹಲ್ಲುಗಳು ಹಾಳಾಗಿ ನಕ್ಕರೆ ಥೀ ಎನಿಸುತ್ತಿತ್ತು.

ಎಸ್.ಜಿ. ಕರನಂದಿ, ಹುನಗುಂದ

*ಜೂಜಿನಲ್ಲಿ ಭಿಕ್ಷುಕನಿಗೆ ಹೆಲಿಕಾಪ್ಟರ್ ದೊರಕಿದರೆ ಅವನ ಸ್ಥಿತಿಗತಿಗಳೇನು?*



ಅದರ ಕೆಳಗೆ ಚಾಪೆ ಹಾಸಿಕೊಂಡು, ಫ್ಯಾನ್ ಹಾಕಿಕೊಂಡು ಅವನು ಕುಳಿತು, ಒಳಗೆ ಬೇರೆ ಭಿಕ್ಷುಕರು ವಾಸಿಸಲು ಬಾಡಿಗೆಗೆ ಕೊಡುವನಂತೆ.

ಆರ್.ಸಿ. ಪರಶುರಾಮ್, ಶಿಕಾರಿಪುರ

*ಮನಸ್ಸು ಮರ್ಕಟವಾದರೆ ಆತ್ಮ?*

ಆ ಸಮಯಕ್ಕೆ ಸೈಲೆಂಟ್ ಮೋಡ್‌ನಲ್ಲಿರುವ ಸೈರನ್.

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

*ಕೃಷ್ಣ ಮತ್ತು ಈಶ್ವರರ ಬಣ್ಣವೇಕೆ ಕಪ್ಪು?*

ಇಬ್ಬರೂ ಬಹಳ ಓಡಾಡುವವರಾದ್ದರಿಂದ ಬಿಸಿಲಿಗೆ ಟ್ಯಾನ್ ಆಗಿದ್ದಾರಂತೆ.

ಆರ್. ಮಧುಸೂದನ, ಹಾಸನ

*ಮಾತಿನಿಂದಲೇ ಕೊಲ್ಲಲು ಸಾಧ್ಯವಾಗಿರುವಾಗ ಜನ ಮಚ್ಚು, ಲಾಂಗು ತೆಗೆದುಕೊಳ್ಳುವುದೇಕೆ?*

ಮಾತಿನಿಂದ ಕೊಲ್ಲುವುದು much longer ಆದ್ದರಿಂದ!

ನಾಗಮಣಿ ಸೋಮಶೇಖರ್, ಮೈಸೂರು

*ನಾನು ಮಧ್ಯವಯಸ್ಕಳಾಗಿದ್ದಾಗ ಆಕಾಶದಲ್ಲಿ ಆಗಾಗ ಮೂಡುತ್ತಿದ್ದ ಕಾಮನಬಿಲ್ಲು ಈಗ ಕಾಣುವುದೇ ಇಲ್ಲವಲ್ಲಾ...?*

ಮೊಮ್ಮಕ್ಕಳ ನಗೆಮುಖಗಳನ್ನು ವೀಕ್ಷಿಸಿ. ಅವುಗಳ ಮುಂದೆ ಆ ಕಾಮನಬಿಲ್ಲು ಕಳಾಹೀನ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ

*ಸುಣ್ಣವಿಲ್ಲದ ವೀಳ್ಯ, ಬಣ್ಣವಿಲ್ಲದ ಮದುವೆ, ಹೆಣ್ಣಿಲ್ಲದ ಮನೆ ಹೇಗಿರಬಹುದು ಸಾರ್?*

ಶಾಹಿ ರಾಜ್‌ಭೋಗ್ ಬೀಡಾ, ಕಪ್ಪು-ಬಿಳುಪು ಸಿನೆಮಾದಲ್ಲಿನ ಮದುವೆ, ಅಬ್ದುಲ್ ಕಲಾಮರ ಮನೆಯಂತೆ ಚೆನ್ನಾಗಿಯೇ ಇರಬಹುದು.

ಎಂ.ಜಿ. ಚನ್ನಸ್ವಾಮಿ, ಭದ್ರಾವತಿ

*ಮದುವೆಯ ಮೊದಲ ರಾತ್ರಿಗೂ, ಜೀವನದ ಕೊನೆಯ ರಾತ್ರಿಗೂ ವ್ಯತ್ಯಾಸವೇನು?*

ಮೊದಲ ರಾತ್ರಿಗೆ ಹಾಲು, ಕೊನೆಯ ರಾತ್ರಿಗೆ ಗಂಗಾಜಲ.

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್

*ಕಬ್ಬಿಗೂ, ಕೊಬ್ಬಿಗೂ ಏನು ವ್ಯತ್ಯಾಸ?*

ಕಬ್ಬು (ಸಿಹಿಯಂಶ) ಏರಿಸಿದರೆ ಕೊಬ್ಬು; ಕೊಬ್ಬು ಇಳಿಸಿದರೆ (ಕೃಶವಾದ) ಕಬ್ಬು!

ನವಿರವಿ, ಬಾಳೇಹೊನ್ನೂರು

*ದೇವರ ವಿಗ್ರಹ, ಚಿತ್ರ, ಪಟಗಳಲ್ಲಿ ಹಣೆ, ಕಿರೀಟ, ಕೈಕಾಲಿಗೆ ಕುಂಕುಮ ಇಡುತ್ತೇವೆ. ಕಿವಿ, ಮೂಗು, ಬಾಯಿಗೆ ಇಡುವುದಿಲ್ಲ. ಏಕೆ?*

ಮೊರೆ ಕೇಳಲು ಕಿವಿ, ವರ ನುಡಿಯಲು ಬಾಯಿ, ಉಸಿರಾಡಲು ಮೂಗಿಗೆ ಇನಿತೂ ಅಡಚಣೆ ಆಗದಿರಲೆಂದು.

ಪ್ರೊ.ಲೊ. ನಾರಾಯಣ್, ಹರಡವಳ್ಳಿ

*ಈ ಪ್ರಪಂಚಕ್ಕೆ ಇನ್ನೂ ಎಷ್ಟು ಆಯಸ್ಸು ಇದೆ ಗುರುಗಳೇ?*

ಹೆಚ್ಚೇನಿಲ್ಲ. ಕಟ್ಟಕಡೆಯ ಸೃಷ್ಟಿ ಲಯ ಆದ ತಕ್ಷಣ ಪ್ರಪಂಚ ಖತಂ!

## ಬಹುಮಾನಿತ ಪ್ರಶ್ನೆ

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

*ಹೆಸರಿಗೆ ಹೆಸರು ಎಂದು ಹೆಸರಿಟ್ಟು ಹೆಸರುವಾಸಿಯಾದವನ ಹೆಸರೇ ಹೆಸರಿಲ್ಲದಿರುವಾಗ ಹೆಸರಿಗೇಕೆ ಹೆಸರು?*

ನಾಮಕರಣದ ನಾಮಧೇಯ ನಾಮಾವಶೇಷವಾಗದೆ ನಾಮಧಾರಿ ನಾಮೆಯೊಳ್ ನಾಮಾಂಕಿತನಾಗಲು!

ವೈ.ಜಿ. ನರಸಿಂಹನ್, ಶಿವಮೊಗ್ಗ

*ತೂಕ ಕಡಿಮೆ ಆಗದಿದ್ದರೆ ಹಣ ವಾಪಸ್ ಪಡೆಯಿರಿ ಎಂಬ ಜಾಹೀರಾತಿನ ಬಗ್ಗೆ ನಿಮ್ಮ ಅನಿಸಿಕೆ?*

ಜಾಹೀರಾತಿನವರು ಜಾಣರು. ಶರೀರದ ತೂಕ ಎಂದು ಹಾಕಿಲ್ಲ; ಪರ್ಸಿನ ತೂಕ ಕಡಿಮೆ ಆಗಿದೆಯಲ್ಲ, ಹಣ ವಾಪಸ್ ಇಲ್ಲ!

ಹೇಮಾವತಿ ಜೈನ್, ಬಳ್ಳಾರಿ

*ಕನ್ನಡದಲ್ಲಿ ಹೊಸತೇನಾಯಿತು ರಾಮ್?*

ಮತ್ತೊಂದು ಸಮ್ಮೇಳನ, ಮತ್ತಷ್ಟು ದುಂದುವೆಚ್ಚ, ಮತ್ತಷ್ಟು ಪೊಳ್ಳು ಘೋಷಣೆಯ ನಂತರ ಕನ್ನಡಿಗ ಕನ್ನಡಮ್ಮನಿಗೆ ಗುಡ್ ನೈಟ್ ಹೇಳಿ ಮಲಗಿದ.

ಪೇಂಟರ್ ಪಾಪು, ಸಂತೇಮರಹಳ್ಳಿ

*ಜೀವನದಲ್ಲಿ ನೆಮ್ಮದಿ ಕೊಡುವುದೆಂದರೆ ಸಾವು ಒಂದೇ ತಾನೆ?*




ಅಲ್ಲ. ನಿದ್ರೆ. ಇದಕ್ಕೆ ಸದನದ ಕದನದ ನಡುವೆಯೂ ಪವಡಿಸುವ ನಮ್ಮ ಮಂತ್ರಿಗಳು, ಮುಖ್ಯಮಂತ್ರಿಗಳೇ ಸಾಕ್ಷಿ.

ವಿನೋದ್ ಕೆ.ಎ. ಬೆಂಗಳೂರು

*ಎಲ್ಲರೂ ಭಗವಂತನಿಗೆ ಪೂಜೆ ಮಾಡುವ ಬದಲು ಯಮಧರ್ಮನಿಗೆ ಪೂಜೆ ಮಾಡಿದರೆ ಆಯಸ್ಸು ಹೆಚ್ಚುವುದಿಲ್ಲವೆ?*

ಹೇಳಲಾಗದು. ಬಾ, ನನ್ನ ಪರಮ ಭಕ್ತನೆ ಎಂದು ಮೊದಲೇ ಕರೆದುಕೊಂಡುಬಿಟ್ಟರೆ... !

■ ರಾಮ್